ಸಿಸಿ ನಂ. 1241/2019 ಸಿಡಬ್ಲ್ಯೂ 19 ಪಿಡಬ್ಲ್ಯೂ 10 ಹೆಸರು -ಎಸ್ ಸಿ ಗಂಗಾಧರ ಸ್ವಾಮಿ

ಸಾಕ್ಷಿಯನ್ನು ದಿನಾಂಕಃ 17.02.2020 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು ಆರೋಪಿ ಪರ ಶ್ರೀ ಕೆ ಪಿ ಎಂ ವಕೀಲರಿಂದ ಃ

1) ದಿನಾಂಕ 24-09-2010 ರಂದು ಆರೋಪಿತರಿಂದ ಮೊಬೈಲ್, ವಾಚ್ ಮತ್ತು ಹಣ ವಶಪಡಿಸಿಕೊಂಡಾಗ ಅವರ ಅಂಗಶೋಧನೆಯನ್ನು ನಮ್ಮ ಸಿಬ್ಬಂದಿ ಮಾಡಿರುತ್ತಾರೆ. ಅಂಗಶೋಧನೆ ಪುಸ್ತಕದಲ್ಲಿ ಯಾರಿಂದ ಅಂಗಶೋಧನೆ ಮಾಡಿಸಿರುತ್ತೇವೆ ಎಂದು ನಮೂದು ಮಾಡಿರುತ್ತಾರೆ. ಅಂಗಶೋಧನೆ ಮಾಡಿದವರನ್ನು ಮೊದಲು ಶೋಧನೆಗೆ ಒಳಪಡಿಸಿರುತ್ತೇವೆ. ಸದರಿ ವಿಚಾರಗಳನ್ನು ಮಹಜರ್ ನಲ್ಲಿ ಬರೆದಿಲ್ಲ ಎಂದರೇ ನಿಜ. ಆರೋಪಿತರು ಯಾವ ಜೋಬಿನಿಂದ ಮೊಬೈಲ್, ಹಣ ತೆಗೆದುಕೊಟ್ಟರು ಎಂದು ನಮಗೆ ಗೊತ್ತಿಲ್ಲ. ವಶಪಡಿಸಿಕೊಂಡ ವಸ್ತುಗಳ ಮೇಲೆ ಚೀಟಿಯನ್ನು ಅಂಟಿಸಿ ಪಂಚಾರ ಸಹಿ ಪಡೆದಿರುತ್ತೇವೆ. ಎಚ್ ಎಂ ಟಿ ಕ್ವಾರ್ಟ್ಜ್ ವಾಚ್ ಎಂದು ನಮೂದು ಮಾಡಿರುತ್ತೇವೆ. ಸದರಿ ವಾಚ್ ಬಣ್ಣ, ಬೆಲ್ಟ ಇರುವುದವನ್ನು ನಮೂದು ಮಾಡಿರುವುದಿಲ್ಲ. ಪಂಚಾರಿಗೆ ಮೌಖಿಕವಾಗಿ ತಿಳಿಸಿರುತ್ತೇವೆ. 2 ಮಹಜರ್ ನ್ನು ನಮ್ಮ ಠಾಣಾ ಸಿಬ್ಬಂದಿ ಬರೆದಿರುತ್ತಾರೆ. ಠಾಣಾ ಸಿಬ್ಬಂದಿಯ ಸಹಿಯನ್ನು ಮಹಜರ್ ಗೆ ಪಡಿದಿಲ್ಲ. ನಾನು ಠಾಣೆಯಲ್ಲಿ ಕುಳಿತುಕೊಂಡು ನಮಗೆ ಅನುಕೂಲ ತಕ್ಕಂತೆ 2 ಮಹಜರ್ ಗಳನ್ನು ಬರೆದು ಪಂಚಾರ ಸಹಿ ಪಡೆದಿರುತ್ತೇನೆ ಎಂದರೆ ಸಾಕ್ಷಿಯು ಮಹಜರ್ ನ್ನು ಠಾಣೆಯಲ್ಲಿ ಬರೆದಿರುತ್ತೇವೆ, ಆದರೆ ನಮಗೆ ಅನುಕೂಲ ತಕ್ಕಂತೆ ಬರೆದಿಲ್ಲ ಎಂದು ಹೇಳುತ್ತಾರೆ. ಆರೋಪಿತರು ನಮ್ಮ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ ನಾನು ಯಾವುದೇ ಸಾಕ್ಷಿದಾರರನ್ನು ವಿಚಾರ ಮಾಡಿ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ.

ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ